# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 358 (470) |
| ಉತ್ತರಿಸಬೇಕಾದ ದಿನಾಂಕ | : | 19.07.2024 |
| ಉತ್ತರಿಸುವ ಸಚಿವರು | : | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಸಿಬ್ಬಂದಿ ವರ್ಗದ ಕೊರತೆ ಹಾಗೂ ಆ ಇಲಾಖೆ ಕಾರ್ಯಾಚರಣೆಗೆ ಬೇಕಾಗಿರುವ ಮೂಲಸೌಲಭ್ಯ / ಸೌಕರ್ಯಗಳನ್ನು ಸುವ್ಯವಸ್ಥಿತವಾಗಿ ಒದಗಿಸಿಲ್ಲದ ಕಾರಣ ಯೋಜನಾನುಷ್ಠಾನದಲ್ಲಿ ಎದುರಿಸುತ್ತಿರುವ ಅನಾನುಕೂಲಗಳನ್ನು ಪರಿಹರಿಸುವಲ್ಲಿ ಸರ್ಕಾರದ ಕ್ರಮಗಳು ಯಾವುವು; (ಸಂಪೂರ್ಣವಾದ ಮಾಹಿತಿ ನೀಡುವುದು) | ಕೋಲಾರ ಪಂಚಾಯತ್ ರಾಜ್ ಇಂಜಿನಿಯಂಗ್ ವಿಭಾಗಕ್ಕೆ ಸಂಬಂಧ ಪಟ್ಟಂತೆ ವಿಭಾಗ ಕಚೇರಿ ಮತ್ತು ಉಪವಿಭಾಗ ಕಚೇರಿಗಳಲ್ಲಿ ಅಧಿಕಾರಿ / ಸಿಬ್ಬಂದಿ ವರ್ಗದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಹಾಗಾಗಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿರಿಸಿ ಕೆಲಸ ನಿರ್ವಹಿಸಲಾಗುತ್ತಿದೆ. ಇಲಾಖೆಯಲ್ಲಿ ಖಾಲಿ ಇರುವ ಸಹಾಯಕ ಇಂಜಿನಿಯರ್ ಮತ್ತು ಕಿರಿಯ ಇಂಜಿನಿಯರ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಕೋಲಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಮತ್ತು ಉಪವಿಭಾಗಗಳಲ್ಲಿ ಸಿಬ್ಬಂದಿಗಳ ಕೊರತೆಯನ್ನು ನಿವಾರಿಸಲು ಹೊಸದಾಗಿ ನೇಮಕಗೊಂಡ 09 ಸಹಾಯಕ ಇಂಜಿನಿಯರ್ ಮತ್ತು 03 ಕಿರಿಯ ಇಂಜಿನಿಯರ್ ಗಳನ್ನು ನೇಮಿಸಿ ಸ್ಥಳನಿಯುಕ್ತಿಗೊಳಿಸಲಾಗಿರುತ್ತದೆ. |
| ಆ) | ಮೂಲಭೂತ ಸೌಲಭ್ಯಗಳನ್ನು ಮತ್ತು ಸೇವೆಯನ್ನು ಶೀಘ್ರವಾಗಿ ಒದಗಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಅದರಡಿಯಲ್ಲಿ ಕೆಲವೊಂದು ಇಲಾಖೆಯನ್ನು ಸೃಷ್ಟಿಸಿದ್ದು, ಸದರಿ ಇಲಾಖೆಗಳಲ್ಲಿ ಮಾನವ ಸಂಪನ್ಮೂಲದ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸಂಪನ್ಮೂಲದ ಕೊರತೆಯನ್ನು ಯಾವ ಕಾಲಮಿತಿಯೊಳಗೆ ಬಗೆಹರಿಸುವುದು; (ಪೂರ್ಣ ಮಾಹಿತಿ ನೀಡುವುದು) | |

| | | |
|---|---|---|
| ಇ) | ಕೋಲಾರ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು; (ಅಧಿಕಾರಿ ವೃಂದವಾರು, ಇಲಾಖೆವಾರು, ಸರ್ಕಾರಿ ಮತ್ತು ಹೊರ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರ ಸಂಪೂರ್ಣ ಮಾಹಿತಿ ನೀಡುವುದು) | ಕೋಲಾರ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮತ್ತು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ವೃಂದವಾರು ಹುದ್ದೆಗಳ ಸಂಪೂರ್ಣ ಮಾಹಿತಿಯನ್ನು ಅನುಬಂಧ - 1 & 2 ರಲ್ಲಿ ನೀಡಲಾಗಿದೆ ಹಾಗೂ ಹೊರ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರ ಮಾಹಿತಿಯನ್ನು ಅನುಬಂಧ - 3 ರಲ್ಲಿ ನೀಡಲಾಗಿದೆ. |

ಗ್ರಾಅಪ 68 ಜಿಪಅ 2024

(ಪ್ರಿಯಾಂಕ್ ಖರ್ಗೆ)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

## ಅನುಬಂಧ – 1

## ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ವಿವರ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1. | ಕಾರ್ಯಪಾಲಕ ಇಂಜಿನಿಯರ್ | 1 | 1 | 0 |
| 2. | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | 5 | 3 | 2 |
| 3. | ಲೆಕ್ಕಾಧೀಕ್ಷಕರು | 1 | 1 | 0 |
| 4. | ಸಹಾಯಕ ಇಂಜಿನಿಯರ್ | 7 | 0 | 7 |
| 5. | ಅಧೀಕ್ಷಕರು | 1 | 0 | 1 |
| 6. | ಕಿರಿಯ ಇಂಜಿನಿಯರ್ | 16 | 11 | 5 |
| 7. | ಪ್ರಥಮ ದರ್ಜೆ ಸಹಾಯಕರು | 6 | 1 | 5 |
| 8. | ದ್ವಿತೀಯ ದರ್ಜೆ ಸಹಾಯಕರು | 7 | 4 | 3 |
| 9. | ಪ್ರಥಮ ದರ್ಜೆ ಲೆಕ್ಕ ಸಹಾಯಕರು | 1 | 1 | 0 |
| 10. | ದ್ವಿತೀಯ ದರ್ಜೆ ಲೆಕ್ಕ ಸಹಾಯಕರು | 2 | 1 | 1 |
| 11. | ಶೀಘ್ರಲಿಪಿಗಾರರು | 1 | 0 | 1 |
| 12. | ಬೆರಳಚ್ಚುಗಾರರು | 7 | 0 | 7 |
| 13. | ವಾಹನ ಚಾಲಕರು | 6 | 0 | 6 |
| 14. | ಗ್ರೂಪ್-ಡಿ | 13 | 7 | 6 |
| | **ಒಟ್ಟು** | **74** | **30** | **44** |

## ಅನುಬಂಧ – 2

### ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ವಿವರ

| ಕ್ರ. ಸಂ. | ಹುದ್ದೆಯ ಪದನಾಮ | ಮಂಜೂರಾದ ಹುದ್ದೆಗಳು | ಭರ್ತಿಯಾದ ಹುದ್ದೆಗಳು | ಖಾಲಿ ಹುದ್ದೆಗಳು |
|---|---|---|---|---|
| 1. | ಕಾರ್ಯಪಾಲಕ ಇಂಜಿನಿಯರ್ | 1 | 1 | 0 |
| 2. | ಸಹಾಯಕ ಕಾರ್ಯಪಾಲಕ ಇಂಜಿನಿಯರ್ | 5 | 3 | 2 |
| 3. | ಭೂವಿಜ್ಞಾನಿ | 1 | 0 | 1 |
| 4. | ಕೆಮಿಸ್ಟ್ | 1 | 0 | 1 |
| 5. | ಸಹಾಯಕ ಇಂಜಿನಿಯರ್ | 14 | 9 | 5 |
| 6. | ಅಧೀಕ್ಷಕರು | 1 | 0 | 1 |
| 7. | ಲೆಕ್ಕಾಧೀಕ್ಷಕರು | 1 | 1 | 0 |
| 8. | ಕಿರಿಯ ಇಂಜಿನಿಯರ್ | 12 | 7 | 5 |
| 9. | ಪ್ರಥಮ ದರ್ಜೆ ಸಹಾಯಕರು | 6 | 5 | 1 |
| 10. | ಪ್ರಥಮ ದರ್ಜೆ ಲೆಕ್ಕ ಸಹಾಯಕರು | 1 | 1 | 0 |
| 11. | ಶೀಘ್ರಲಿಪಿಗಾರರು | 1 | 0 | 1 |
| 12. | ದ್ವಿತೀಯ ದರ್ಜೆ ಸಹಾಯಕರು | 7 | 0 | 7 |
| 13. | ದ್ವಿತೀಯ ದರ್ಜೆ ಲೆಕ್ಕ ಸಹಾಯಕರು | 2 | 2 | 0 |
| 14. | ಬೆರಳಚ್ಚುಗಾರರು | 7 | 0 | 7 |
| 15. | ವಾಹನ ಚಾಲಕರು | 6 | 0 | 6 |
| 16. | ಗ್ರೂಪ್-ಡಿ | 13 | 0 | 13 |
| | **ಒಟ್ಟು** | **79** | **28** | **51** |

## ಅನುಬಂಧ – 3

**ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ**

| ಕ್ರ.ಸಂ. | ಹುದ್ದೆಯ ಪದನಾಮ | ಸಂಖ್ಯೆ |
|---|---|---|
| 1 | ಬೆರಳಚ್ಚುಗಾರರು | 7 |
| 2 | ವಾಹನ ಚಾಲಕರು | 4 |
| 3 | ಗ್ರೂಪ್-ಡಿ | 1 |

**ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳ ವಿವರ**

| ಕ್ರ.ಸಂ. | ಹುದ್ದೆಯ ಪದನಾಮ | ಸಂಖ್ಯೆ |
|---|---|---|
| 1 | ಸಪೋರ್ಟ್ ಇಂಜಿನಿಯರ್ | 16 |
| 2 | ಡೇಟಾ ಎಂಟ್ರಿ ಆಪರೇಟರ್ | 8 |
| 3 | ಗ್ರೂಪ್-ಡಿ | 12 |